# ನನ್ನ ಓದು

ಇಲ್ಲಿ 'ಪ್ರಾಮುಖ್ಯತೆ' ಎಂಬ ಪದ ಆ ಸಾಲಿಗೆ ವರದಿಗಾರಿಕೆಯ ಗುಣವನ್ನು ಆರೋಪಿಸುತ್ತಿದೆ. ಮನಸ್ಸು ಮುಟ್ಟುವ ಸೂಕ್ಷ್ಮಗಳು ಅವಸರದ ನಿರೂಪಣೆಯಲ್ಲಿ ಮೊಡ್ಡಾಗಿ ಹೋದರೆ ಕಥೆಯ ಉಂಟುಮಾಡುವ ಪರಿಣಾಮವು ತೆಳುವಾಗುತ್ತದೆ. ಸಂಭಾಷಣೆ, ಪ್ರತಿಕ್ರಿಯೆ, ದೇಹಭಾಷೆಗಳೂ ಕಥೆಯ ಪರಿಸರವನ್ನು ಕಟ್ಟುತ್ತವೆ. ಇಂಥ ಸೂಕ್ಷ್ಮಗಳೇ ಕಥೆಯ ದೇಹವನ್ನು ರೂಪಿಸುವುದು ಎಂಬ ಅರಿವು ಕಥೆಗಾರನಿಗೆ ಬೇಕೇ ಬೇಕು. ಈ ಕಥೆಯಲ್ಲಿ ಸಂಭಾಷಣೆಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಒಂದು ಪಾತ್ರ ಚಿತ್ರವತ್ತಾಗಿ ಮೂಡುವಲ್ಲಿ, ಅವನು ಕಾಣುವ ರೀತಿ, ಆಡುವ ಮಾತಿನ ಶೈಲಿ ಎಲ್ಲವೂ ಮುಖ್ಯವೇ. ಹಾಗಾಗಿಯೇ ಇಲ್ಲಿ ಬರುವ ಪಾತ್ರಗಳು ನಮ್ಮ ಕಣ್ಣಿಗೆ ಕಟ್ಟುವುದಿಲ್ಲ. ಅವರ ಮಾತುಗಳು ಪಾತ್ರಗಳ ಮಾತುಗಳಾಗಿ ಕಿವಿಗೆ ಕೇಳಿಸುವುದಿಲ್ಲ. ಅವು ಕಥೆಗಾರನಿಗೆ ಬೇಕಾದ್ದು ಹೇಳುವ ಟೂಲ್ ಆಗಿ ಅಷ್ಟೇ ಕಾಣಿಸುತ್ತವೆ. ಪಾತ್ರಗಳು ಒಂದು ಹಂತದ ನಂತರ ಕಥೆಗಾರನನ್ನು ಮೀರಿ ಬೆಳೆಯದೇ ಹೋದರೆ, ಕಥೆಗಾರನ ನಿಯಂತ್ರಣವನ್ನು ಮೀರಿ ತಮ್ಮದೇ ಧ್ವನಿಯಲ್ಲಿ ಮಾತಾಡಲು ತೊಡಗದೇ ಹೋದರೆ ಅವುಗಳ ವ್ಯಕ್ತಿತ್ವ ಓದುಗನಿಗೆ ಕಾಣಿಸುವುದಿಲ್ಲ. ಪಾತ್ರಗಳು ನೆನಪಿನಲ್ಲಿ ಉಳಿಯುವುದೂ ಇಲ್ಲ. ಹಾಗೆಂದು ಅನಿಲ್ ಅವರಿಗೆ ಇದರ ಮಹತ್ವ ಗೊತ್ತಿಲ್ಲದ ಎಂದಲ್ಲ. ಮುಂದಿನ ಕಥೆ, 'ಗೋಲ್‌ಗುಂಬಜ್ ಎಕ್ಸ್‌ಪ್ರೆಸ್'ನಲ್ಲಿನ ಸಂಭಾಷಣೆಗಳು ಚುರುಕಾಗಿವೆ. ಅಲ್ಲಿ ಕಟ್ಟಿಕೊಡುವ ವಾತಾವರಣವೂ ಅಷ್ಟೇ ಗಾಢವಾಗಿದೆ. ಆದರೆ ಸಣ್ಣಕಥೆಗೆ ಇರಬೇಕಾದ ಕೇಂದ್ರವೇ ಇಲ್ಲದೇ ಈ ಕಥೆ ದಿಕ್ಕುತಪ್ಪುತ್ತದೆ. ಓದುಗನಿಗೆ ಒಂದು ಜಗತ್ತನ್ನು ಪರಿಚಯಿಸಿ ಇನ್ನೊಂದು ಜಗತ್ತಿನ ಬಗ್ಗೆ ಹೇಳಿದರೆ ಕೈಯಲ್ಲಿ ಚುಚ್ಚು ಚಮಚ ಕೊಟ್ಟು, ಪಾನಕದ ಪಾತ್ರೆಯನ್ನು ಎದುರಿಗಿಟ್ಟ ಹಾಗಾಗುತ್ತದೆ. 'ಗೋಲ್‌ಗುಂಬಜ್…' ಕಥೆಯಲ್ಲಿ ಆಗುವುದೂ ಅದೇ. ರೈಲಿನಲ್ಲಿ ಅಕಾರಣ ದೃಷ್ಟಿಯುದ್ಧಕ್ಕೆ ಒದಗಿಬರುವ ಮುದುಕನಿಗೆ ನಿರೂಪಕ ಮುಖಾಮುಖಿಯಾಗುವ ಚಿತ್ರದೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಆ ಚಿತ್ರ ಎಷ್ಟು ಗಾಢವಾಗಿದೆಯೆಂದರೆ, ನಾವು ಆ ವಾತಾವರಣದ ಭಾಗವಾಗಿ ಬಿಡುತ್ತೇವೆ. ಅದಕ್ಕೆ ಪೂರಕವಾಗಿಯೇ ಬೆಳೆಯುತ್ತ ಹೋಗುತ್ತದೆ. ಆದರೆ ಈ ದಿಕ್ಕಿನಲ್ಲಿ ಒಂದಿಷ್ಟು ಸಾಗಿದ ಮೇಲೆ ಕಥೆಯ ದಿಕ್ಕು ಬದಲಾಗಿಬಿಡುತ್ತದೆ. ನಿರೂಪಕ ತನ್ನ ಬಾಲ್ಯ ಸ್ನೇಹಿತ ರಮೇಶನ ಬಗ್ಗೆ ಯೋಚನೆ ಮಾಡತೊಡಗುತ್ತಾನೆ. ಕಥೆಯ ಕೇಂದ್ರ ಎಲ್‌ಜಿಬಿಟಿಕ್ಯೂ ಸಮಸ್ಯೆಯತ್ತ ಹೊರಳಿಬಿಡುತ್ತದೆ. ಹಾಗಾಗಿಯೇ ಕುತೂಹಲಕಾರಿಯಾಗಿಯೂ, ಗಾಢವಾಗಿಯೂ ಬೆಳೆಯುವ ಕಥೆ ತನ್ನ ಕಟ್ಟುವಿಕೆಯಲ್ಲಿನ ಶಿಥಿಲಗುಣದಿಂದಲೇ ಕುಸಿದುಬಿಡುತ್ತದೆ.

'ಆತ್ಮಸಾಕ್ಷಿ' ಕಥೆಯ ಪೀರಪ್ಪ ಅಚಾನಕ್ಕಾಗಿ ತೆಗೆದುಕೊಂಡ ಲಂಚದ ಕಾರಣಕ್ಕೆ ಒಳಗೊಳಗೇ ಕುಸಿಯುತ್ತಾ ಹೋದರೆ, 'ಹಳದಿಬಣ್ಣದ ಹರಳಿನುಂಗುರ' ಕಥೆಯ ನಾಯಕ ದ್ಯಾಮಣ್ಣ ಯಾರೋ ಕಣಿ ಹೇಳುವವರು ಹಾಕಿ ಹೋದ ಉಂಗುರ ತನ್ನ ಅದೃಷ್ಟವನ್ನು ಬದಲಾಯಿಸಿಬಿಡುತ್ತದೆ ಎಂಬ ನಂಬಿಕೆಯಿಂದ ಒಳಗೊಳಗೇ ಹಂತ ಹಂತವಾಗಿ ಭ್ರಷ್ಟನಾಗುತ್ತ ಹೋಗುತ್ತಾನೆ. ಕೊನೆಗೆ ಆ ಆಸೆಯಿಂದ ಹುಟ್ಟಿಕೊಂಡ ವ್ಯವಸ್ಥೆಯೇ ಅವನ ಮಗನನ್ನು ಬಲಿತೆಗೆದುಕೊಳ್ಳುತ್ತದೆ. ಒಳ್ಳೆಯ ಬದುಕಿನ ಕನಸನ್ನು ಕಾಣುತ್ತಾ ರಾಜಸ್ಥಾನಕ್ಕೆ ಹೋಗಿ ಸಿಕ್ಕಿಹಾಕಿಕೊಳ್ಳುವ ಮುಗ್ಧ ಹುಡುಗಿ ಕಾವೇರಿಯ ಕಥೆ 'ಕಸ್ತೂರಿ ಕ್ಯಾಂಟೀನ್.' ಮುಗ್ಧ ಹೆಣ್ಣೊಬ್ಬಳ ದಾರುಣ ಬದುಕನ್ನು ಚಿತ್ರಿಸುವ ದಾರಿಯಲ್ಲಿ ಈ ಕಥೆ ಸಾಗುತ್ತದೆ. ಆದರೆ ತನ್ನದಲ್ಲದ ವಾತಾವರಣವನ್ನು ತನ್ನದಾಗಿಸಿಕೊಳ್ಳದೇ ಕಥೆಯಲ್ಲಿ ತಂದರೆ ಅದು ಕೃತಕವಾಗಿಬಿಡುತ್ತದೆ. ಈ ಕಥೆಯಲ್ಲಿನ ರಾಜಸ್ಥಾನದ ವಾತಾವರಣವೂ ಹಾಗೆ ಕೃತಕವಾಗಿದೆ. ಹಾಗಾಗಿ ಅಲ್ಲಿ ನಡೆಯುವ ಘಟನೆಗಳೂ ಕೃತಕವಾಗಿಯೇ ಕಾಣಿಸುತ್ತವೆ. ತನ್ನೂರಿನಲ್ಲಿ ಕ್ಯಾಂಟೀನ್‌ನಲ್ಲಿ ಕಾಣಿಸುವ ದಿಟ್ಟ ಹುಡುಗಿ ಕಾವೇರಿಯ ಸ್ಪಷ್ಟಚಿತ್ರ ರಾಜಸ್ಥಾನದ ಮನೆಯಲ್ಲಿ ಮಸುಕಾಗಿಬಿಡುತ್ತದೆ. ಅನಿಲ್ ಅವರಿಗಿರುವ ಕಾಳಜಿ, ಕಥೆಗಳ ಮೂಲಕ ಅವರು ಹೇಳಲು ಹೊರಟಿರುವ ಸಂಗತಿಗಳು ಮೆಚ್ಚುಗೆಗೆ ಅರ್ಹವಾದವೇ ಆಗಿವೆ. ಆದರೆ ಆ ಕಾಳಜಿಯನ್ನು ಅನುಭವವಾಗಿ ದಾಟಿಸುವುದಕ್ಕೆ ಕಸುಬುದಾರಿಗೆ ಬೇಕಾಗುತ್ತದೆ. ಆ ಕಸುಬುದಾರಿಕೆಯನ್ನು ಸಿದ್ಧಿಸಿಕೊಳ್ಳಲು ಬೇಕಾದ ಪ್ರತಿಭೆ ಖಂಡಿತಾ ಅನಿಲ್ ಅವರಲ್ಲಿ ಇದೆ. ಅದರ ಜೊತೆಗೆ ಶ್ರಮ ಮತ್ತು ಸಂಯಮವನ್ನು ಸೇರಿಸಿದರೆ, ಅನಿಲ್ ಬರವಣಿಗೆಯಲ್ಲಿ ಹೊಸ ಜಿಗಿತ ಕಾಣಿಸುವುದು ಸಾಧ್ಯ. ●